4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಧುಗಿರಿ

ಎಸ್.ಸಿ. ನಂಃ 5033/2019

**(ದಿನಾಂಕಃ 27-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಹೆಸರುಃ ಚೇತನಾ ಪಿ.ಡಬ್ಲ್ಯೂ- 01.

ಗಂಡನ ಹೆಸರುಃ ರಂಗನಾಥ ಸಿ.ಡಬ್ಲ್ಯೂ- 04.

ವಯಸ್ಸುಃ 32 ವರ್ಷ

ಉದ್ಯೋಗಃ ಮನೆ ಕೆಲಸ

ವಾಸಃ ಲಕ್ಕೇನಹಳ್ಳಿ, ಗುಬ್ಬಿ ತಾಲ್ಲೂಕು.

**ಮುಖ್ಯ ವಿಚಾರಣೆಃ** ಸರ್ಕಾರಿ ಅಭಿಯೋಜಕರಿಂದಃ

ಮನು ಗೊತ್ತಿಲ್ಲ. ಚಾಸಾ-6 ಪಲ್ಲವಿ ಅಲಿಯಾಸ್ ಪ್ರಿಯಾಂಕ ನನಗೆ ಗೊತ್ತಿಲ್ಲ. ಚಾಸಾ-5 ರಂಗನಾಥ ನನ್ನ ಗಂಡ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ನನಗೆ ಯಾರು ಗೊತ್ತಿಲ್ಲ. ಮನು ಹಾಗೂ ಪಲ್ಲವಿ ಕೊನೆಯದಾಗಿ ಎಲ್ಲಿ ಕೂಡಿ ಇದ್ದರು ಮತ್ತು ಅವರ ಮಧ್ಯೆ ಏನು ಘಟನೆ ನಡೆಯಿತು ಎಂದು ನನಗೆ ಗೊತ್ತಿಲ್ಲ. ಮನು ಈಗ ಜೀವಂತ ಇಲ್ಲದೇ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆತನ ಸಾವು ಹೇಗೆ ಮತ್ತು ಎಲ್ಲಿ ಸಂಭವಿಸಿತು ಎಂದು ನನಗೆ ಗೊತ್ತಿಲ್ಲ.

ನನ್ನ ಗಂಡ ಅಡಿಕೆ ವ್ಯಾಪಾರ ಮಾಡುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಪಿಪಿ ಯವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ನನ್ನ ಗಂಡ ಚಾಸಾ-5 ರಂಗನಾಥ ಕಾರಿನ ಚಾಲಕನಾಗಿದ್ದ ಎಂದರೆ ಸರಿಯಲ್ಲ. ನಾನು ಬಿ.ಎಸ್ಸಿ ಪದವಿಧರೆ ಎಂದರೆ ಸರಿ. ನಾನು ಪೋಲಿಸರ ಮುಂದೆ ಹೇಳಿಕೆ ನೀಡುವ 2 ವರ್ಷ ಪೂರ್ವದಲ್ಲಿ ಡ್ಯಾನ್ಸ್ ಸ್ಕೂಲ್ ಮ್ಯಾನೆಜ್ಮೆಂಟ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ 5 ವರ್ಷದ ಮಗಳಾದ ವಿಭಾಳಿಗೆ ಆರೋಗ್ಯ ಸರಿಯಾಗಿ ಇಲ್ಲದೇ ಇದ್ದುದರಿಂದ ನಾನು ಕೆಲಸ ಬಿಟ್ಟು ಮನೆಯಲ್ಲಿ ಇರುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮಗಳ ಚಿಕಿತ್ಸೆಯ ಸಲುವಾಗಿ ಬೆಂಗಳೂರಿನ ಕಾಮಾಕ್ಷಿ ಪಾಳ್ಯದಲ್ಲಿ ಹೋಗಿ ವಾಸವಾಗಿದ್ದೆವು ಎಂದರೆ ಸರಿಯಲ್ಲ. ಆರ್ಥಿಕ ಸಮಸ್ಯೆಯಾಗಿದ್ದರಿಂದ ನಂತರ ತುಮಕೂರಿಗೆ ಬಂದು ವಾಸವಾಗಿದ್ದೆವು ಎಂದರೆ ಸರಿಯಲ್ಲ. ನನ್ನ ಗಂಡ ಚಾಸಾ-5 ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ತುಮಕೂರಿನಿಂದ ಹೋಗಿ-ಬಂದು ಮಾಡುತ್ತಿದ್ದ ಎಂದರೆ ಸರಿಯಲ್ಲ.

ದಿನಾಂಕಃ 22-10-2018 ನೇದ್ದಕ್ಕಿಂತ ಎರಡು ದಿನಗಳ ಹಿಂದೆ 4-5 ದಿನಗಳ ಕಾಲ 22 ನೇ ತಾರೀಖಿನಿಂದ ಪ್ರವಾಸ ಹೋಗೋಣ ಎಂದು ನನಗೆ ತಿಳಿಸಿದ ಎಂದರೆ ಸರಿಯಲ್ಲ. ಅದರಂತೆ, ದಿನಾಂಕಃ 22-10-2018 ರಂದು ಮಧ್ಯಾಹ್ನ 12-00 ಗಂಟೆ ಸುಮಾರಿಗೆ ನನ್ನ ಗಂಡ ಸ್ವಿಫ್ಟ್ ಕಾರ್ ತೆಗೆದುಕೊಂಡು ಮನೆಯ ಬಳಿ ಬಂದ ಎಂದರೆ ಸರಿಯಲ್ಲ. ಕಾರಿನಲ್ಲಿ ಒಬ್ಬ ಹುಡುಗ ಮತ್ತು ಹುಡುಗಿ ಇದ್ದರು ಎಂದರೆ ಸರಿಯಲ್ಲ. ಹುಡುಗಿಯ ಕತ್ತಿನಲ್ಲಿ ಹಸಿಅರಿಶಿಣ ದಾರ ಹಾಗೂ ತಾಳಿ ಇತ್ತು, ಅದನ್ನು ನೋಡಿದಾಗ ಅವರು ಆಗಷ್ಟೆ ಮದುವೆಯಾಗಿದ್ದಾರೆ ಎಂದು ಅನಿಸಿತು ಎಂದರೆ ಸರಿಯಲ್ಲ. ಆಗ ಕಾರಿನಲ್ಲಿದ್ದ ಹುಡುಗ ಹುಡುಗಿ ಮನು ಮತ್ತು ಪಲ್ಲವಿ ಎಂದು ನನ್ನ

ಗಂಡ ಪರಿಚಯ ಮಾಡಿಕೊಟ್ಟ ಎಂದರೆ ಸರಿಯಲ್ಲ. ಕಾರಿನ ಹಿಂಭಾಗದ ಬುಲೆಟ್‌ನಲ್ಲಿ ಅನಂತ ಮತ್ತು ದಿಲೀಪ್ ಎಂಬ ಇಬ್ಬರು ಬಂದಿದ್ದು ಅವರನ್ನು ಸಹ ನನಗೆ ಪರಿಚಯ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಅಲ್ಲಿಗೆ ಒಂದು ಟಾಟಾಸುಮೊ ಬಂತು ಎಂದರೆ ಸರಿಯಲ್ಲ. ನಾವು ಕಾರನ್ನು ಬಿಟ್ಟು ಟಾಟಾಸುಮೋ ಹತ್ತಿದೆವು ಎಂದರೆ ಸರಿಯಲ್ಲ. ಮಾರ್ಗಮಧ್ಯದಲ್ಲಿ ಮನು ನನ್ನ ಹಾಗೂ ನನ್ನ ಗಂಡನ ಮೊಬೈಲ್ ಫೋನ್ ಗಳನ್ನು ಕಸಿದುಕೊಂಡು ಆಚೆ ಎಸೆದ ಎಂದರೆ ಸರಿಯಲ್ಲ. ಆಗ ಮನು ಕಾರಿನಲ್ಲಿದ್ದ ಪಲ್ಲವಿಯನ್ನು ನನಗೆ ಪರಿಚಯ ಮಾಡಿಕೊಟ್ಟ ಎಂದರೆ ಸರಿಯಲ್ಲ. ಅವರಿಬ್ಬರು ಪರಸ್ಪರ ಪ್ರೀತಿಸುತ್ತಿದ್ದು ಒಪ್ಪಿ ಮದುವೆಯಾಗಿದ್ದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಆ ವಿಚಾರ ಮನೆಯವರಿಗೆ ತಿಳಿದರೇ ಗಲಾಟೆಯಾಗುತ್ತದೆ ಆದ್ದರಿಂದ ಸ್ವಲ್ಪ ದಿನ ಎಲ್ಲಾದರೂ ಹೋಗಿ ಬರೋಣ ಎಂದು ಹೊರಟಿದ್ದೇವೆ ಎಂಬುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಅದಕ್ಕೆ ನಾವು ಮೊದಲು ಒಪ್ಪಲಿಲ್ಲ, ನಂತರ ಹೆದರಿಸಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಮನು ರೌಡಿಶೀಟರ್ ಏನು ಬೇಕಾದರೂ ಮಾಡಲು ಹೇಸುವುದಿಲ್ಲ ಎಂದು ಹೆದರಿ ನಾವು ಸುಮ್ಮನಾದೆವು ಎಂದರೆ ಸರಿಯಲ್ಲ. ನಂತರ ನಾನು, ನನ್ನ ಗಂಡ, ಮನು ಹಾಗೂ ಪಲ್ಲವಿ ಟಾಟಾಸುಮೋದಲ್ಲಿ ಹೋದೆವು ಎಂದರೆ ಸರಿಯಲ್ಲ. ಹಿಂದಿನಿಂದ ಅನಂತ ಮತ್ತು ದಿಲೀಪ್ ಬುಲೆಟ್ ನಲ್ಲಿ ಬಂದರು ಎಂದರೆ ಸರಿಯಲ್ಲ. ಮನು ಪರಿಚಯಸ್ಥರ ಕಡೆ ಹಣ ಇಸಿದುಕೊಂಡ ಎಂದರೆ ಸರಿಯಲ್ಲ. ಅಲ್ಲಿಂದ ಅನಂತ ಮತ್ತು ದಿಲೀಪನನ್ನು ಟಾಟಾಸುಮೋಗೆ ಹತ್ತಿಸಿಕೊಂಡು ನೇರವಾಗಿ ತಮಿಳುನಾಡಿನ ಕೃಷ್ಣಗಿರಿ ಬಳಿ ಒಂದು ಹಳ್ಳಿ ಸಮೀಪ ಮನೆಗೆ ಹೋಗಿ, ಒಂದು ರಾತ್ರಿ ಅಲ್ಲಿ ಇದ್ದೆವು ಎಂದರೆ ಸರಿಯಲ್ಲ. ಮಾರನೇ ದಿನ ಒಂದು ಜೈಲೋ ವಾಹನ ಅಲ್ಲಿಗೆ ಬಂತು ಎಂದರೆ ಸರಿಯಲ್ಲ. ಅದರಲ್ಲಿ ನಾವೆಲ್ಲರೂ ಹಾಗೂ ನನ್ನ ಮಗಳು ವಿಭಾ ಹತ್ತಿ ಸುತ್ತ-ಮುತ್ತ ಇದ್ದ ಸ್ಥಳಗಳಿಗೆ ಭೇಟಿ ನೀಡಿ, 2 ದಿನಗಳ ಕಾಲ ಅಲ್ಲಿಯೇ ವಾಸವಿದ್ದೆವು ಎಂದರೆ ಸರಿಯಲ್ಲ. ನಂತರ ಮನು ನಮ್ಮೆಲ್ಲರನ್ನೂ ಇನೋವಾ ಕಾರಿನಲ್ಲಿ ಕೇರಳ ಕಡೆಗೆ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ನಂತರ 3-4 ದಿನಗಳ ಕಾಲ ಬೋಟ್‌ಹೌಸ್‌ನಲ್ಲಿ ಇದ್ದೆವು ಎಂದರೆ ಸರಿಯಲ್ಲ. ನಂತರ

ಕೊಡೆಕೆನೆಲ್‌ಗೆ ಹೋಗಿ ಹೋಮ್‌ಸ್ಟೇನಲ್ಲಿ ಉಳಿದುಕೊಂಡೆವು ಎಂದರೆ ಸರಿಯಲ್ಲ. ಅಲ್ಲಿ ಮನು ಕುಡಿಯುತ್ತಿದ್ದರಿಂದ, ಪ್ರಿಯಾಂಕ ಆಕೆಯ ಅಪ್ಪನ ಮನೆಗೆ ಹೋಗಬೇಕೆಂದು ಗಲಾಟೆ ಮಾಡಿದಳು ಎಂದರೆ ಸರಿಯಲ್ಲ. ಕುಡಿಯಲು ತರಲು ಹೋಗಿದ್ದ ಅನಂತ ಅಲ್ಲಿಯೇ ತಪ್ಪಿಸಿಕೊಂಡನು ಎಂದರೆ ಸರಿಯಲ್ಲ. ನಂತರ, ಮನು ನಮ್ಮನ್ನು ಮುಳಬಾಗಿಲು ಮತ್ತು ಬಂಗಾರಪೇಟೆಗೆ ಕರೆದುಕೊಂಡು ಹೋಗಿ ಲಾಡ್ಜ್ ನಲ್ಲಿ ಉಳಿಸಿದ ಎಂದರೆ ಸರಿಯಲ್ಲ. ಬಂಗಾರಪೇಟೆಯಲ್ಲಿ ಮನುರವರ ಸಂಬಂಧಿಕರ ಬಳಿ ಹಣ ಪಡೆದು ಅಲ್ಲಿಂದ ತಮಿಳುನಾಡಿಗೆ ಕರೆದುಕೊಂಡು ಹೋಗಿ ಅಲ್ಲಿ ಸುಮಾರು ದಿನಗಳ ಕಾಲ ಲಾಡ್ಜ್ ಗಳಲ್ಲಿ ಉಳಿಸಿಕೊಂಡ ಎಂದರೆ ಸರಿಯಲ್ಲ.

ನಂತರ ನೆಲ್ಲೂರಿನಲ್ಲಿ ನನ್ನ ಗಂಡನ ಐ.ಡಿ ಪ್ರೂಫ್ ಪಡೆದು ಆತನ ತಾಯಿ ಮತ್ತು ಬೆಂಗಳೂರಿನ ಸ್ನೇಹಿತನಿಗೆ ಫೋನ್ ಮಾಡಿ, 6 ನೇ ಆರೋಪಿ ಬಸವರಾಜು ರವರ ಚಲನ-ವಲನ ಹಾಗೂ ಏನೂ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡ ಎಂದರೆ ಸರಿಯಲ್ಲ. ಅಲ್ಲಿಯೇ ಮನು ಮತ್ತು ಪಲ್ಲವಿ ಒಟ್ಟಿಗೆ ನಿಂತಿರುವ ಫೋಟೋ ತೆಗೆದು ಫೇಸ್‌ಬುಕ್ ಗೆ ಹಾಕಿದ ಎಂದರೆ ಸರಿಯಲ್ಲ. ಬಳಿಕ ನಾವು ನೆಲ್ಲೂರು ಮತ್ತು ಅದರ ಸುತ್ತ-ಮುತ್ತ ಸ್ವಲ್ಪ ದಿನ ಅಲ್ಲಿಯೇ ಉಳಿದುಕೊಂಡೆವು ಎಂದರೆ ಸರಿಯಲ್ಲ. ನಂತರ, ಬಸ್ಸಿನಲ್ಲಿ ಮನು ನಮ್ಮನ್ನು ಹೈದರಾಬಾದಿಗೆ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಅಲ್ಲಿ ಒಂದು ದಿನ ಲಾಡ್ಜ್ ನಲ್ಲಿ ಉಳಿದುಕೊಂಡು ನಂತರ ನಮ್ಮನ್ನು ಸೀದಾ ಮೈಸೂರಿಗೆ ಕರೆದುಕೊಂಡು ಬಂದ ಎಂದರೆ ಸರಿಯಲ್ಲ. ಮೈಸೂರಿನ ಒಂದು ಲಾಡ್ಜ್ ನಲ್ಲಿದ್ದಾಗ ದಿಲೀಪ ತಪ್ಪಿಸಿಕೊಂಡ ಎಂದರೆ ಸರಿಯಲ್ಲ. ಬಳಿಕ ಮನು ಅಲ್ಲಿ ಇರುವುದು ಸೂಕ್ತವಲ್ಲ ಎಂದು ನಮ್ಮನ್ನು ಸೀದಾ ಮಡಿಕೇರಿ, ಊಟಿ, ಬಂಡೀಪುರಗಳಿಗೆ ಕರೆದುಕೊಂಡು ಹೋಗಿ, ಅಲ್ಲಿ ಹೋಮ್ ಸ್ಟೇ ಹಾಗೂ ಲಾಡ್ಜ್ ಗಳಲ್ಲಿ ಉಳಿಸಿ ನಂತರ ಮುಳಬಾಗಿಲು, ಆಂಧ್ರಪ್ರದೇಶ, ತಿರುಪತಿ, ತಿಪಟೂರು ನೇದ್ದವುಗಳಿಗೆ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ತಿಪಟೂರಿನಲ್ಲಿ ಮನು ತನ್ನ ಸಂಬಂಧಿಕರ ಬಳಿ ಹಣ ಕೇಳಿದ್ದು, ಹಣ ಸಿಗಲಿಲ್ಲ ಮತ್ತು ಬಾಡಿಗೆ ರೂಮ್ ಸಿಗಲಿಲ್ಲ. ಆದ್ದರಿಂದ ಹಿರಿಯೂರು ಕಡೆ ಕರೆದುಕೊಂಡು ಹೋದ ಎಂದರೆ

ಸರಿಯಲ್ಲ. ಅಲ್ಲಿ ರೂಮ್‌ನಲ್ಲಿದ್ದು ಮರುದಿನ ಶಿರಾಗೆ ಬಂದು ಅಲ್ಲಿಂದ ಬಂಗಾರಪೇಟೆಗೆ ಹೋದೆವು ಎಂದರೆ ಸರಿಯಲ್ಲ. ನಂತರ, ಕೃಷ್ಣಗಿರಿಗೆ ಹೋಗಿದ್ದಾಗಿ ದಿಲೀಪ ಬೆಂಗಳೂರಿನಲ್ಲಿ ಪೋಲಿಸರ ಕೈಗೆ ಸಿಕ್ಕ ಬಗ್ಗೆ ತಿಳಿಯಿತು ಎಂದರೆ ಸರಿಯಲ್ಲ. ನಂತರ ಒಂದು ವಾರ ನಮ್ಮನ್ನು ಆಂಧ್ರ ಪ್ರದೇಶದ ಕಡೆ ಇರಿಸಿಕೊಂಡ ಎಂದರೆ ಸರಿಯಲ್ಲ. ನಂತರ, ನಮ್ಮನ್ನು ಸಿ.ಎಸ್.ಪುರ, ಹೆಬ್ಬೂರು ಕಡೆಗೆ ಕರೆದುಕೊಂಡು ಬಂದು ಮನುಗೆ ಪರಿಚಯವಿರುವ ತೋಟಗಳಲ್ಲಿ ಇದ್ದು, ನಂತರ, ಸ್ವಲ್ಪ ದಿನ ಶಿವಮೊಗ್ಗ ಕಡೆ ಇದ್ದಾಗ, ಅಲ್ಲಿ ಡಾಬಾವೊಂದರ ಬಳಿ ಊಟ ಮಾಡುವಾಗ, ಡಾಬಾ ಹುಡುಗನ ಮೊಬೈಲ್ ಪಡೆದು, ಡಾಬಾದಲ್ಲಿದ್ದ ವೈಫೈ ಮೂಲಕ ಇಂಟರ್ನೆಟ್ ಬಳಸಿ ಮನು ಮತ್ತು ಪಲ್ಲವಿ ಇಬ್ಬರು ಮಾತನಾಡಿ ಆ ವಿಡಿಯೋ ವನ್ನು ಮನು ತನ್ನ ಫೇಸ್ ಬುಕ್ ಗೆ ಹಾಕಿಕೊಂಡ ಎಂದರೆ ಸರಿಯಲ್ಲ. ನಂತರ ಮನು ನಮ್ಮನ್ನು ಧರ್ಮಸ್ಥಳ ಹಾಗೂ ಮುರುಡೇಶ್ವರ ಕಡೆಗೆ ಸುತ್ತಾಡಿಸಿ ಕೊನೆಗೆ ತುರುವೇಕೆರೆಗೆ ಕರೆದುಕೊಂಡು ಬಂದು ಅಲ್ಲಿ ಲಾಡ್ಜ್‌ನಲ್ಲಿ ಇರಿಸಿದ ಎಂದರೆ ಸರಿಯಲ್ಲ.

ಆಗ ನಾನು ಮತ್ತು ನನ್ನ ಗಂಡ ಮೊದಲೇ ಮಾತನಾಡಿಕೊಂಡಂತೆ ಮಗಳಾದ ವಿಭಾಳನ್ನು ಕರೆದುಕೊಂಡು ಸೀದಾ ತುಮಕೂರಿಗೆ ಬಂದು ತುಮಕೂರಿನ ಹೆಚ್.ಎಂ.ಎಸ್ ಕಾಲೇಜ್ ಬಳಿ ಇರುವ ನನ್ನ ದೊಡ್ಡಪ್ಪನ ಮನೆಯಲ್ಲಿದ್ದೆನು ಎಂದರೆ ಸರಿಯಲ್ಲ. ನಾನು ಬಂದ 2-3 ದಿನಗಳ ಬಳಿಕ ನಾನಿದ್ದಲ್ಲಿಗೆ ಪಲ್ಲವಿ ರವರ ಮಾವ 7 ನೇ ಆರೋಪಿ ಧರಣಿ ಬಂದು ನನ್ನನ್ನು ಮಾತನಾಡಿಸಿ, ನಡೆದನ್ನೆಲ್ಲಾ ನನ್ನಿಂದ ಕೇಳಿದ ಎಂದರೆ ಸರಿಯಲ್ಲ. ಆಗ ಧರಣಿರವರು ನನ್ನ ಗಂಡನಾಗಲೀ, ಮನು ಅಥವಾ ಪಲ್ಲವಿ ಸಂಪರ್ಕಿಸಿದರೆ ಆತನಿಗೆ ತಿಳಿಸುವಂತೆ ಫೋನ್ ನಂಬರ್ ಕೊಟ್ಟು ಹೋದ ಎಂದರೆ ಸರಿಯಲ್ಲ.

ಅದಾದ 3-4 ದಿನಗಳ ನಂತರ ನನ್ನ ಗಂಡ ನನಗೆ ಫೋನ್ ಮಾಡಿ ಮಾತನಾಡಿಸಿದಾಗ, ನನ್ನ ಗಂಡ ಮಾಡಿದ್ದ ಫೋನ್ ನಂಬರ್ ನ್ನು ಧರಣಿ ರವರಿಗೆ

ನೀಡಿದೆ ಎಂದರೆ ಸರಿಯಲ್ಲ. ಆ ರೀತಿ ನಾನು ನಂಬರ್ ನೀಡಿದ 2 ದಿನಗಳ ನಂತರ ಕೊರಟಗೆರೆ ಬಳಿ ಮನುರವರ ಕೊಲೆಯಾದ ವಿಚಾರ ಟಿ.ವಿ.ಯಲ್ಲಿ ಬಂತು ಎಂದರೆ ಸರಿಯಲ್ಲ. ನಂತರ, ನ್ಯಾಯಾಲಯದ ಮುಂದೆ ಹಾಜರಿರುವ 6 ಮತ್ತು 7 ನೇ ಆರೋಪಿತರು ಇತರೇ ಆರೋಪಿತರೊಂದಿಗೆ ಕೂಡಿಕೊಂಡು ಚನ್ನರಾಯಪಟ್ಟಣದ ಲಾಡ್ಜ್‌ನಲ್ಲಿದ್ದ ಮನು ಹಾಗೂ ಪಲ್ಲವಿಯನ್ನು ಎತ್ತಿ ಹಾಕಿಕೊಂಡು ಬಂದ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಆ ಕಾಲಕ್ಕೆ ನನ್ನ ಗಂಡ ಅವರ ಕೈಗೆ ಸಿಗಲಿಲ್ಲ ಎಂದು ತಿಳಿಯಿತು ಎಂದರೆ ಸರಿಯಲ್ಲ.

ನಂತರ, ದಿನಾಂಕಃ 07-01-2019 ರಂದು ರಾತ್ರಿ ವೇಳೆ ಮನುರವರನ್ನು ಬಸವರಾಜು ಹಾಗೂ ಧರಣಿ ಕಡೆಯವರು ಸಂಚು ಮಾಡಿ, ಕೊಲೆ ಮಾಡಿದ ವಿಚಾರವನ್ನು ಪೋಲಿಸರ ಮುಂದೆ ಹೇಳಿಕೆ ಮೂಲಕ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ದಿನಾಂಕಃ 06-02-2019 ರಂದು ನನಗೆ ಈಗ ವಿವರವಾಗಿ ಓದಿ ಹೇಳಲಾದಃ ನನ್ನ ಯಜಮಾನರಾದ ............. ಕೊಲೆ ಮಾಡಿರುತ್ತಾರೆಃ ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-1 ಎಂದು ಗುರುತಿಸಲಾಯಿತು.

ಆ ರೀತಿ ನಾನು ನೀಡಿದ ಹೇಳಿಕೆಯನ್ನು ನನಗೆ ಈಗ ಲ್ಯಾಪ್‌ಟಾಪ್‌ನಲ್ಲಿ ಪ್ಲೇ ಮಾಡಿ ತೋರಿಸಿದ ಆಡಿಯೋ-ವಿಡಿಯೋ ರೂಪದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಸದರಿ ಆಡಿಯೋ-ವಿಡಿಯೋ ಕ್ಲಿಪ್ ಸಿ.ಡಿ. ನಲ್ಲಿರುವ ಕ್ರಮ ಸಂಃ 216 ನೇದ್ದರ ಭಾಗವಾಗಿದ್ದು, ಸದರಿ ವಿ.ಸಿ.ಡಿ.ಯನ್ನು ಮು.ಮಾ-1 ಎಂದು ಹಾಗೂ ಸಾಕ್ಷಿಗೆ ಕ್ರಮ ಸಂಃ 216 ರ ಭಾಗವನ್ನು ಮು.ಮಾ-1(ಎ) ಎಂದು ಗುರುತಿಸಲಾಯಿತು.

ಸದರಿ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಟಿ.ಎಸ್.ಕೆ ವಕೀಲರಿಂದಃ ಏನೂ ಇಲ್ಲ.**

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇ ಕೇ ಸರಿ ಇದೆ

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಧುಗಿರಿ